ಬಂದಿದ್ದ. ಅವರು ಹೊರಡುವ ಹೊತ್ತಿನಲ್ಲಿ ಅಮ್ಮನನ್ನು ಕಾರಿನ ಹಿಂದಿನ ಸೀಟಿನಲ್ಲಿ ಕುಳ್ಳಿರಿಸುತ್ತಿದ್ದಾಗ ಮನೆಯೊಳಗೆ ಮಲಗಿದ್ದ ಬ್ರೂನೋ ಓಡೋಡಿ ಬಂದ. ವಿಚಿತ್ರ ಧ್ವನಿಯಲ್ಲಿ ಅಳುತ್ತಾ ರಂಪಾಟವಾಡಿದ. ಅಮ್ಮನ ಸೀರೆ ಎಳೆದು ಇಳಿಸಲು ಮುಂದಾದ. ಕಾರಿನ ಮುಂದೆ ಹೋಗಿ ಅರಚಾಡಿದ. ಬ್ರೂನೋನ ಪ್ರೀತಿ ಕಂಡು ಅಮ್ಮನೂ ಕರಗಿದರು. ಅಂದಿನಿಂದ ಅಮ್ಮನ ಜೊತೆಯಲ್ಲಿ ಕಾಲ ಬುಡದಲ್ಲಿ ಕುಳಿತು ಟೀವಿ ನೋಡುವ ಅದೃಷ್ಟ ನಮ್ಮ ಬ್ರೂನೋ ಪಾಲಿಗೆ ಒದಗಿಬಂತು. ಮಾತೃಹೃದಯದ ಅಮ್ಮ ನಾಯಿಪ್ರೀತಿಗೂ ಅತ್ತದ್ದು ನನಗೆ ನಿಜಕ್ಕೂ ಇವತ್ತಿಗೂ ಕೌತುಕ.

ಬ್ರೂನೋ ಎಲ್ಲರ ಮನಸ್ಸನ್ನು ಗೆದ್ದಿದ್ದ. ದೂರದಲ್ಲಿ ನನ್ನ ಸ್ಕೂಟರ್ ಶಬ್ದವಾಯಿತೆಂದರೆ ಮನೆಯ ಒಳಗಿಂದ ಓಡೋಡಿ ಬರುತ್ತಿದ್ದ. ಬಾಲ ಅಲ್ಲಾಡಿಸಿ ಸ್ಕೂಟರ್ ಹತ್ತಿ ಕುಳಿತುಬಿಡುತ್ತಿದ್ದ. ನಾನೂ ಸಹ ಬಿಡುವಾದಾಗ ಅವನನ್ನು ಒಂದು ರೌಂಡ್ ಹೊಡೆಸುತ್ತಿದ್ದೆ.

ಬೆಳಿಗ್ಗೆ ಪೇಪರ್‌ನವನು ಚರ್ ಎಂದು 'ಪ್ರಜಾವಾಣಿ' ಎಸೆದೊಡನೆ, ನಮ್ಮ ಬ್ರೂನೋ ಸರ್ರನೆ ಓಡೋಡಿ ಬಾಯಲ್ಲಿ ಕಚ್ಚಿಕೊಂಡು ಪೇಪರ್ ತಂದು ನನ್ನ ಮುಂದೆ ಇಡುತ್ತಿದ್ದ. ಹಾಲಿನ ಪ್ಯಾಕೆಟ್‌ಗಳನ್ನು ತಂದು ಹೆಂಡತಿ ಮುಂದೆ ಇಡುತ್ತಿದ್ದ. ನಾವು ಮನೆಯವರು ಯಾವುಯಾವುದಕ್ಕೋ ವಾಗ್ವಾದ ಮಾಡುತ್ತಿದ್ದರೆ ಜಗಳ ಬಿಡಿಸಲು ಓಡೋಡಿ ಬರುತ್ತಿದ್ದ. ತಮಾಷೆಗಾಗಿ ನಾನು ನನ್ನ ಮಗಳಿಗೆ ಹೊಡೆದಂತೆ ಮಾಡಿದರೆ ಬ್ರೂನೋ ನನ್ನ ಮೇಲೇರಿ ಬರುತ್ತಿದ್ದ. ಹೆಂಡತಿ ನನಗೆ ಜೋರು ಮಾಡಿದರೆ ಬೌವ್ ಬೌವ್ ಎಂದು ಪ್ರತಿಕ್ರಿಯಿಸುತ್ತಿದ್ದ.

ಅದೊಂದು ದಿನ ಬೆಳ್ಳಂಬೆಳಿಗ್ಗೆಯೇ ಅವನ ಅಮ್ಮ ಹುಡುಕಿಕೊಂಡು ಬಂದಿದ್ದಳು. ಹೇಗೆ ಹುಡುಕಿದಳೋ? ನಮ್ಮ ಮನೆ ಸುತ್ತ ಅಡ್ಡಾಡಿ ಬೋರಾಡಿ ಮಗನನ್ನು ಹೊರಗೆ ಕರೆಸಿಕೊಂಡು ಮುದ್ದಾಡಿದ್ದಳು. ಇವನೂ ಸಹ ಒಂದು ವರ್ಷದ ನಂತರ ತನ್ನನ್ನು ಹುಡುಕಿಕೊಂಡು ಬಂದ ತನ್ನ ಅಮ್ಮನನ್ನು ಸಮಾಧಾನ ಮಾಡಿ, 'ನಾನು ಸುಖವಾಗಿದ್ದೇನೆ' ಎಂಬ ಸಂದೇಶ ರವಾನಿಸಿದ್ದ. ಅಮ್ಮ ಹೋದ ಮೇಲೆ ದಿನಾ ಪೂರಾ ಎರಡು ಕಂಗಳಲ್ಲೂ ನೀರು ತರಿಸಿಕೊಂಡು ವಿಚಿತ್ರವಾಗಿ ಅತ್ತಿದ್ದ.

ಯಾವುದೋ ಬರಹದ ಬಗ್ಗೆ ಯೋಚಿಸುತ್ತಿದ್ದ ನನ್ನನ್ನು ಮಗಳು ಓಡೋಡಿ ಬಂದು ತಬ್ಬಿದಳು. ಯಾವುದಾದರೂ ಗುಡ್‌ನ್ಯೂಸ್ ಹೇಳುವಂತಹ ಸಂದರ್ಭಗಳಲ್ಲಿ ಮಗಳು ತುಂಬಾ ಭಾವುಕಳಾಗಿರುತ್ತಾಳೆ. 'ಏನು ಪುಟ್ಟ' ಎಂದೆ. 'ಅಪ್ಪಾ ನನಗೆ ಜಾಬ್ ಆಯ್ತು. ಈಗಷ್ಟೇ ಮೆಸೇಜ್ ಬಂತು. ಮುಂದಿನ ವಾರ ಜಾಯಿನ್ ಆಗ್ಬೇಕು' ಎಂದಳು. ವಂಡರ್‌ಫುಲ್ ಎಂದೆ.

ಮಗಳು ಉದ್ಯೋಗಕ್ಕೆ ಹೋಗಲು ಶುರು ಮಾಡಿದಳು. ನಾನೂ ನನ್ನ ಆಫೀಸ್ ಕೆಲಸ, ಕನ್ನಡ ಸಂಘಟನೆ, ಬರವಣಿಗೆ, ಪ್ರಕಾಶನ ಅಂತೆಲ್ಲಾ ಬಿಜಿಯಾದೆ. ಅವತ್ತು ಕನ್ನಡ ರಾಜ್ಯೋತ್ಸವ



ಮುಗಿಸಿಕೊಂಡು ಮನೆಗೆ ಹಿಂತಿರುಗಿದಾಗ ಮಧ್ಯಾಹ್ನ ಆಗಿತ್ತು. ಮೈಸೂರಿನಿಂದ ತಮ್ಮ ಬಂದಿದ್ದ. ಹೊಸ ತೋಟ ಕೊಂಡ ಸಮಾಚಾರ ಹೇಳುತ್ತಾ ಕುಳಿತಿದ್ದ. ಮೈಸೂರಿನಿಂದ ಹದಿನೈದು ಕಿಲೋಮೀಟರ್ ದೂರದಲ್ಲಿ ಒಂದೂವರೆ ಎಕರೆ ತೋಟ ಕೊಂಡು ಬಾಳೆ ಹಾಕಿಸಿದ್ದನಂತೆ. ಸುತ್ತೆಲ್ಲಾ ತೆಂಗಿನ ಗಿಡಗಳನ್ನು ನೆಡಿಸಿದ್ದನಂತೆ. ಹೀಗೆ ಎಲ್ಲವನ್ನೂ ಹೇಳುತ್ತಾ ಹೇಳುತ್ತಾ ಬ್ರೂನೋನ ಗಮನಿಸುತ್ತಲೇ ಇದ್ದ. 'ಎಲ್ಲಿಂದ ತಂದ್ರೋ ಇದನ್ನು, ಬಾಳ ಚೂಟಿಯಾಗಿದೆ' ಎಂದ.

ಅಮ್ಮ ಬ್ರೂನೋ ಪ್ರವರ ಹೇಳಲು ಶುರು ಮಾಡಿದರು. ಮಗಳಿಗೂ ಕೆಲಸಕ್ಕೆ ರಜಾ. ಮನೆಯಲ್ಲಿಯೇ ಇದ್ದಳು. ಎಲ್ಲವನ್ನೂ ಕೇಳಿದ ತಮ್ಮ ಇದ್ದಕ್ಕಿದ್ದಂತೆ, 'ಬ್ರೂನೋನ ನನಗೆ ಕೊಡು. ಇಂತಹ ಚೂಟಿ ನಾಯಿಗಳು ಮನೆಯಲ್ಲಿರುವುದಕ್ಕಿಂತ ಪ್ರಕೃತಿಯ ಜೊತೆಯಲ್ಲಿ ಬೆಳೆಯಬೇಕು. ನಮ್ಮ ತೋಟದಲ್ಲಿ ಓಡಾಡಿಕೊಂಡಿರಲಿ' ಎಂದ. 'ನೋಡಿ, ಎಲ್ಲರೂ ಯೋಚನೆ ಮಾಡಿ' ಎಂದು ತಲೆಯಲ್ಲಿ ಹುಳು ಬಿಟ್ಟು ಹೊರಟೇ ಬಿಟ್ಟ.

ಮಗಳು ತನ್ನ ವೃತ್ತಿಯಲ್ಲಿ ಬಿಜಿ ಆದ ಮೇಲೆ ಬ್ರೂನೋನ ನೋಡಿಕೊಳ್ಳಲು ಅವಕಾಶವೇ ಸಿಗುತ್ತಿರಲಿಲ್ಲ. ಅದೂ ಮೊದಲಿಗಿಂತ ದೊಡ್ಡದಾಗಿ ಚುರುಕಾಗಿ ಬೆಳೆದಿತ್ತು. ನಮ್ಮ ಜೊತೆಗೆ ಉತ್ಕಟವಾಗಿ ಆಪ್ತತೆ ಬೆಳೆದ ಈ ಬ್ರೂನೋನ ಮೈಸೂರಿಗೆ ಕಳಿಸಲು ನನ್ನ ಒಪ್ಪಿಗೆಯಂತೂ ಇರಲಿಲ್ಲ. ಆದರೆ ಅತ್ಯಂತ ಅಚ್ಚರಿಯಾದ ನಿರ್ಧಾರ ಮನೆಯಲ್ಲಿ ಜರುಗಿತ್ತು. ಮಗಳು, ಹೆಂಡತಿ, ಅಮ್ಮ ಎಲ್ಲರೂಮೈಸೂರಿನ ತೋಟದ ಮನೆಗೆ ಬ್ರೂನೋನ ಕಳಿಸಲು ಒಮ್ಮತದಿಂದ ನಿಶ್ಚಯಿಸಿದ್ದರು.

ಮಗಳು ಒಂದು ವಾರ ಪೂರ್ತಿ ರಜಾ ಹಾಕಿ ಬ್ರೂನೋ ಜೊತೆಯಲ್ಲಿ ಕಾಲಕಳೆದಳು. ಮುಂದಿನ ಭಾನುವಾರ ನಾವೆಲ್ಲಾ ಕಾರಿನಲ್ಲಿ ಬ್ರೂನೋನ ಕರೆದೊಯ್ಯುವ ಸಿದ್ಧತೆ ಜರುಗಿತ್ತು. ಅಕ್ಕಪಕ್ಕದ ಮನೆಯವರು, ಮಕ್ಕಳು ಎಲ್ಲರೂ ಬ್ರೂನೋನ ನೋಡಿಕೊಂಡು ಹೋದರು. ನನ್ನ ಮಗಳಿಗಂತೂ ಒಳಗೊಳಗೇ ಸಂಕಟ.

ಅವತ್ತು ಭಾನುವಾರ ಬೆಳಿಗ್ಗೆ ಎಂಟಕ್ಕೇ ಕಾರಿನಲ್ಲಿ ಹೊರಟೆವು. ವರ್ಷಾಳ ತೆಕ್ಕೆಯಲ್ಲಿ ಬ್ರೂನೋ. ಅವಳ ಮುಖ ತೇಜೋಹೀನವಾಗಿತ್ತು. ಹೆಂಡತಿ ಕಲಾ, ಬ್ರೂನೋಗೆ ಸಂಬಂಧಿಸಿದ ಎಲ್ಲಾ ಪರಿಕರಗಳನ್ನು ಬ್ಯಾಗ್‌ನಲ್ಲಿ ತುಂಬಿದ್ದಳು. ಮಧ್ಯಾಹ್ನ ಹನ್ನೆರಡು ಗಂಟೆಗೆ ಮೈಸೂರಿನ ತಮ್ಮನ ಮನೆ ತಲುಪಿದೆವು. ಹೊಸ ಜಾಗಕ್ಕೆ ಹೊಂದಿಕೊಳ್ಳಲಾರದೆ ಬ್ರೂನೋ ಕುಂಯ್ ಕುಂಯ್ ಎನ್ನುತ್ತಿದ್ದ.

ಸಂಜೆ ಐದಕ್ಕೆ ತೋಟದ ಮನೆಗೆ ಎಲ್ಲರೂ ಹೊರಟೆವು. ಬ್ರೂನೋಗೆ ಶುಭವಿದಾಯ ಹೇಳಲಿಕ್ಕೆ. ದಾರಿಯುದ್ದಕ್ಕೂ ಬ್ರೂನೋ ಕುರಿತಂತೇ ಮಾತು. ಅಮ್ಮ ಕಣ್ಣೀರಾಗಿದ್ದರು. ಹೆಂಡತಿಯಂತೂ ಬ್ರೂನೋನ ಜೊತೆಗೆ ಆಟವಾಡುತ್ತಾ ಕುಳಿತಿದ್ದಳು. ಮಗಳು ಸಪ್ಪಗಿದ್ದಳು.

ತೋಟದ ಪರಿಸರ ಮನೋಹರವಾಗಿದೆ. ಎತ್ತ ನೋಡಿದರೂ ಹಸಿರೇ ಹಸಿರು. ಸುತ್ತೆಲ್ಲಾ ತೋಟಗಳು. ದೊಡ್ಡ ದೊಡ್ಡ ಮರಗಳಿಂದ ಕಾಡಿನ ವಾತಾವರಣ. ನಮ್ಮನ್ನು ನೋಡಿ ತೋಟದ ಉಸ್ತುವಾರಿ ನೋಡಿಕೊಳ್ಳುವ ರಾಜಣ್ಣ ಓಡೋಡಿ ಬಂದ. ಅಷ್ಟರಲ್ಲಿ ಬ್ರೂನೋ ತೋಟದೊಳಕ್ಕೆ ಓಡಿ ಹೋದ. ಜೊತೆಯಲ್ಲಿ ವರ್ಷ ಕೂಡ. ನಾವು ತೋಟದ ಮನೆಗೆ ಹೋಗಿ ಕುಳಿತುಕೊಳ್ಳುವಷ್ಟರಲ್ಲಿ ಬ್ರೂನೋ ಚಂಗನೆ ನೆಗೆದು ಬಂದ. ಮತ್ತೆ ಎತ್ತಲೋ ಓಡಿದ. ಸಂಜೆಯ ಸೂರ್ಯ ಮುಳುಗುವ ಸನ್ನಾಹ ನಡೆಸಿದ್ದ. ಹೆಂಡತಿ ಕಲಾ ಬ್ರೂನೋಗೆ ನೆಲಕ್ಕೆ ಹಾಸುವ ಬಟ್ಟೆಗಳು, ತಿಂಡಿ ತಿನಿಸುಗಳು ಎಲ್ಲವನ್ನು ರಾಜಣ್ಣ–ಗೌರಮ್ಮ ಅವರಿಗೆ ಕೊಟ್ಟಳು. ವರ್ಷ ಬ್ರೂನೋ ಜೊತೆಯಲ್ಲಿ ನಮ್ಮೆಲ್ಲರ ಫೋಟೊ ತೆಗೆದಳು. ತಮ್ಮ ಹೊರಡೋಣ ಎಂದ. ನಾನು ತೋಟದ ಮನೆಯ ಮುಂಭಾಗದ ಕೊಟ್ಟಿಗೆಯ ಕಂಬಕ್ಕೆ ಬ್ರೂನೋನ ಕಟ್ಟಿದೆ. ಬ್ರೂನೋಗೆ ಕಂಬಕ್ಕೆ ಕಟ್ಟಿದ್ದು ಅರಿವಾಯಿತೋ ಏನೋ – ಬೊಗಳತೊಡಗಿದ. ತನ್ನನ್ನು ಇಲ್ಲಿಯೇ ಬಿಟ್ಟುಹೋಗುತ್ತಾರೆ ಎನ್ನುವುದು ಅರಿವಾದಂತೆ ಕುಂಯ್ ಕುಂಯ್ ಎಂದು ಶಬ್ದ ಮಾಡಿದ.

ಮನೆಯವರೆಲ್ಲರ ಕಣ್ಣಲ್ಲಿ ನೀರು. ನಾನಂತೂ ನೋವಿನಿಂದ ಮೌನವಾಗಿದ್ದೆ.

ಎಲ್ಲರೂ ಕಾರಿನತ್ತ ಬಂದೆವು. ತಮ್ಮ ಡ್ರೈವಿಂಗ್ ಸೀಟಿನಲ್ಲಿ ಕುಳಿತಿದ್ದ. ಸೂರ್ಯ ಮಬ್ಬಾದಂತೆ ಕತ್ತಲು ಅಡರುತ್ತಿತ್ತು. ಆ ಸುತ್ತಣ ಪರಿಸರ ಮೈ ಝುಲ್ಲೆನಿಸುತ್ತಿತ್ತು. ನೀರವ ಪರಿಸರದಲ್ಲಿ ಬ್ರೂನೋನ ಆಕ್ರಂದನ ಮಾರ್ದನಿಸುತ್ತಿತ್ತು. ಮಗಳು ವರ್ಷಾ ಬ್ರೂನೋ ಕಡೆಗೇ ಕಣ್ಣಾಯಿಸುತ್ತಾ ಮಂಕಾಗಿದ್ದಳು.

ಬಾಳೆ ಗಿಡಗಳಲ್ಲಿ ಅಲ್ಲೊಂದು ಇಲ್ಲೊಂದು ಗೊನೆ ಹಸಿರಾಗಿ ತೂಗಾಡುತ್ತಿದ್ದವು. 'ನೀವೇನೂ ಚಿಂತೆ ಮಾಡ್ಬೇಡಿ. ನಾನು ಚೆನ್ನಾಗಿ ನೋಡ್ಕೋತೀನಿ, ಹೊರಡಿ' ಎಂದ ರಾಜಣ್ಣ. ನಮ್ಮ ಕಾರು ಊರಿನ ಕಡೆ ಹೊರಟಿತು.

ಪ್ರತಿಕ್ರಿಯಿಸಿ: **feedback@sudha.co.in**